# ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿಗಳು | ಪ್ರತಿವಾದಿಗಳು |
| --- | --- |
| ಡಿ.ಎ.ಚಂದ್ರಯ್ಯ ತಂದೆ ಹೆಚ್.ಅಂಜಿನಪ್ಪ ವರಕೇರಿ, ಚಿತ್ತವಾಡ್ಗಿ , ಹೊಸಪೇಟೆ | ಡಿ.ಈಶ್ವರಪ್ಪ ತಂದೆ ಅಂಜಿನಪ್ಪ ಚಿತ್ತವಾಡ್ಗಿ, ಹೊಸಪೇಟೆ |

ಪೀಠಿಕೆ:-

ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು ಹೊಸೂರು ಗ್ರಾಮದ ಸ.ನಂ.22/*ವಿಸ್ತೀರ್ಣ 1.61 ಎಕರೆ ಜಮೀನಿನ ಪಟ್ಟದಾರರಾದ **ಹೆಚ್ ಅಂಜಿನಪ್ಪ** ಇವರು ದಿನಾಂಕ 10-12-2011ರಂದು ಮೃತಪಟ್ಟಿರುತ್ತಾರೆ. ಇವರ ಹೆಂಡಿತಿಯಾದ **ಶ್ರೀಮತಿ ಸಿದ್ದಮ್ಮ** ಇವರು ಸಹ ದಿನಾಂಕ 10-07-2014ರಂದು ಮೃತಪಟ್ಟಿರುತ್ತಾರೆ ಕಾರಣ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಯು ಈ ಕಾರ್ಯಾಲಯದ ಅರ್ಜಿ ಕಿಯೋಸ್ಕದಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರು ಹೊಸಪೇಟೆ ಇವರು ಪ್ರಕ್ರಿಯೆ ಪ್ರಾರಂಭಿಸಲಾಗಿ ನಮೂನೆ-21ನ್ನು ಸಂಬಧಪಟ್ಟವರಿಗೆ ಜಾರಿ ಮಾಡಿ ಗ್ರಾಮದಲ್ಲಿ ಪ್ರಚೂರ ಪಡಿಸಿರುತ್ತಾರೆ. ನಿಗಧಿತ ಅವಧಿಯೊಳಗಾಗಿ ಪ್ರತಿವಾದಿಯಾದ ಡಿ.ಈಶ್ವರಪ್ಪ ತಂದೆ ಅಂಜಿನಪ್ಪ ಇವರು ಹಕ್ಕುಬದಲಾವಣೆ ಮಾಡಬಾರದೆಂದು ದಿನಾಂಕ 23-03-2016 ರಂದು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಕಂದಾಯ ನಿರೀಕ್ಷಕರು ಹೊಸಪೇಟೆ ಇವರು ಮುಂದಿನ ಕ್ರಮಕ್ಕಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 09-06-2016 ರಂದು ಆರಂಬಿಸಿ ದಿನಾಂಕ: 14-07-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿ ಮತ್ತು ಪ್ರತಿವಾದಿಗಳು ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ. ವಾದಿಯು, ಪ್ರತಿವಾದಿ ತನಗೆ ಅಣ್ಣನಾಗಬೇಕೆಂದು ಹಾಗೂ ನನ್ನ ಸದರಿ ಜಮೀನು ತನ್ನ ಭಾಗಕ್ಕೆ ಬಂದಂತಹ ಜಮೀನಾಗಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಪ್ರತಿವಾದಿಯು ಸದರಿ ಜಮೀನನ್ನು ತನ್ನ ತಮ್ಮನಾದ ವಾದಿಯ ಹೆಸರಿಗೆ ಹಕ್ಕುಬದಲಾವಣೆ ಮಾಡಲು ತನ್ನ ತಕರಾರು ಇರುವುದಿಲ್ಲವೆಂದು ಹೇಳಿಕೆ ನೀಡಿ ಒಪ್ಪಿಗೆ ನೀಡಿರುತ್ತಾರೆ. ಕಾರಣ ಪೌತಿ ವಾರಸತ್ವ ಪ್ರಕಾರ ಈ ಕೆಳಗಿನಂತೆ.

ಸಂ/ಕಂ/ಪಹಣಿ/ತಕರಾರು/20/2016-17 ದಿನಾಂಕ:4/8/2016

<u>ಆದೇಶ</u>

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ವಾಸ್ತಾವಾಂಶ ಹಿನ್ನಲೆ ಯಿಂದಾಗಿ ಹೊಸಪೇಟೆ ತಾಲೂಕಿನ ಹೊಸುರು ಗ್ರಾಮದ ಸ.ನಂ.22/* ವಿಸ್ತೀರ್ಣ 1.61 ಎಕರೆ ಜಮೀನನ್ನು ಪೌತಿ ವಾರಸತ್ವ ಪ್ರಕಾರ ಡಿ.ಎ.ಚಂದ್ರಯ್ಯ ತಂದೆ ಹೆಚ್.ಅಂಜಿನಪ್ಪ ಹಕ್ಕುಬದಲಾವಣೆ ಮಾಡಲ ಆದೇಶಿಸಲಾಯಿತು.

ಈ ಆದೇಶವು ದಿನಾಂಕ 4/8/2016ರಂದು ಉಕ್ತಲೇಖನ ನೀಡಿ ತೆರದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು ಹೊಸಪೇಟೆ

ಗೆ

1)ವಾದಿ ಮತ್ತು ಪ್ರತಿವಾದಿ

2) ಭೂಮಿ ಕೇಂದ್ರ

3) ಕಂದಾಯ ಪರಿವೀಕ್ಷಕರು ಹೊಸಪೇಟೆ